## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 160 |
| 2) | ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ: | : | 10.12.2024 |
| 4) | ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸುವ ಸಲುವಾಗಿ ಉಪನಗರ ರೈಲು ಯೋಜನೆಯನ್ನು ಯಾವಾಗ ಜಾರಿಗೊಳಿಸಲಾಗುವುದು ಹಾಗೂ ಈ ಯೋಜನೆಯ ಎಷ್ಟು ಕಾರಿಡಾರ್ ಒಳಗೊಂಡ ಸಬ್ ಅರ್ಬನ್ ಯೋಜನೆಯಾಗಿದೆ ವಿವರವಾದ ಮಾಹಿತಿ ನೀಡುವುದು;</td><td>ಭಾರತ ಸರ್ಕಾರದ ರೈಲ್ವೆ ಮಂತ್ರಾಲಯದ ಮೂಲಕ 21ನೇ ಅಕ್ಟೋಬರ್ 2020 ರಂದು ಮಂಜೂರು ಮಾಡಿರುವ ಬೆಂಗಳೂರು ಉಪನಗರ ರೈಲು ಯೋಜನೆಯು (Bengaluru Sub-urban Railway Project) ರೂ.15767 ಕೋಟಿಗಳ ವೆಚ್ಚದಲ್ಲಿ, 148.17 ಕಿ.ಮೀ. ನೆಟ್‌ವರ್ಕ್ ಉದ್ದದ ಯೋಜನೆಯಾಗಿದ್ದು, ರಾಷ್ಟ್ರೀಯ ಉಪನಗರ ರೈಲು ನೀತಿ, 2018 ರ ಅಡಿಯಲ್ಲಿ ಕಾರ್ಯಗತಗೊಳ್ಳುತ್ತಿರುವ ಭಾರತದ ಮೊದಲ ಯೋಜನೆಯಾಗಿದೆ. ಇದನ್ನು ಡಿಸೆಂಬರ್-2027 ರೊಳಗೆ ಕಾರ್ಯಾರಂಭ ಮಾಡಲು ಯೋಜಿಸಲಾಗಿದೆ.<br><br>ಈ ಯೋಜನೆಯು ಈ ಕೆಳಕಂಡ 4 ಕಾರಿಡಾರ್‌ಗಳನ್ನು ಒಳಗೊಂಡಿದೆ:<br>
<table>
<tr><th>Corridors</th><th>Section</th><th>Length (in Kms)</th></tr>
<tr><td>1</td><td>Bengaluru - Devanahalli + Airport Connectivity.</td><td>41.40</td></tr>
<tr><td>2</td><td>Baiyappanahalli – Chikkabanawara</td><td>25.01</td></tr>
<tr><td>3</td><td>Kengeri – Whitefield</td><td>35.52</td></tr>
<tr><td>4</td><td>Heelalige – Rajanukunte</td><td>46.24</td></tr>
<tr><td></td><td>Total</td><td>148.17</td></tr>
</table>
</td></tr>
<tr><td>ಆ)</td><td>ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸುತ್ತಿರುವ ಶೇಕಡಾವಾರು ಮೊತ್ತವೆಷ್ಟು: ಹಾಲಿ ಈ ಅನುದಾನದಲ್ಲಿ ಯಾವ ಯಾವ ಕಾರಿಡಾರ್ ಯೋಜನೆ ಪ್ರಗತಿಯಲ್ಲಿದೆ ಹಾಗೂ ಯಾವ ಕಾರಿಡಾರ್ ಯೋಜನೆಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಪ್ರಯಾಣಕ್ಕೆ ಅನುಕೂಲ ಮಾಡಲಾಗುವುದು; (ವಿವರ ನೀಡುವುದು)</td><td>ಯೋಜನೆಗೆ ಕರ್ನಾಟಕ ಸರ್ಕಾರ ಮತ್ತು ರೈಲ್ವೇ ಮಂತ್ರಾಲಯವು ತಲಾ 20:20 ಅನುಪಾತದಲ್ಲಿ ಅನುದಾನವನ್ನು ಒದಗಿಸುತ್ತಿದ್ದು, ಯೋಜನಾ ವೆಚ್ಚದ ಉಳಿಕೆ ಶೇ.60 ರಷ್ಟನ್ನು Bilateral Funding Agency ಯು 500 ಮಿಲಿಯನ್ ಯುರೋ ಹಣವನ್ನು (ರೂ.7438 ಕೋಟಿಗಳು) ಭರಿಸುತ್ತಿದೆ (KfW, ಜರ್ಮನಿಯಿಂದ 300 ಮಿಲಿಯನ್ ಯುರೋ ಮತ್ತು EIB ನಿಂದ 200 ಮಿಲಿಯನ್ ಯುರೋ).<br><br>ಪ್ರಗತಿಯಲ್ಲಿರುವ ಕಾರಿಡಾರ್‌ಗಳ ವಿವರ ಈ ಕೆಳಕಂಡಂತಿದೆ:<br><br>ಅ) <u>ಕಾರಿಡಾರ್-2</u>: ಬೈಯಪ್ಪನಹಳ್ಳಿ ಇಂದ ಚಿಕ್ಕಬಾಣಾವರ (25.2 ಕಿಮೀ) ದಿನಾಂಕ:26.08.2022 ರಂದು ಅವಾರ್ಡ್ ನೀಡಲಾಗಿರುತ್ತದೆ. ರೈಲ್ವೆ ಭೂಮಿಯನ್ನು K-RIDE ಗೆ ಗುತ್ತಿಗೆ ನೀಡಲಾಗಿದ್ದು, ಭೂಸ್ವಾಧೀನ 98.5% ಲಭ್ಯವಿರುತ್ತದೆ. ಭೌತಿಕ ಪ್ರಗತಿ ಶೇ.30ರಷ್ಟು ಸಾಧಿಸಲಾಗಿದೆ.<br><br>ಆ) <u>ಕಾರಿಡಾರ್-4</u>: ಹೀಲಲಿಗೆ-ರಾಜಾನುಕುಂಟೆ (46.22 ಕಿ.ಮೀ) ದಿನಾಂಕ:30.12.2023 ರಂದು ಅವಾರ್ಡ್ ನೀಡಲಾಗಿರುತ್ತದೆ. ರೈಲ್ವೆ ಭೂಮಿಯನ್ನು K-RIDEಗೆ ಗುತ್ತಿಗೆ ನೀಡಲಾಗಿದೆ. ಸರ್ವೆ, ಯುಟಿಲಿಟಿ ಶಿಫ್ಟಿಂಗ್, ಜೋಡಣೆ, ವಿನ್ಯಾಸಗಳು, ಜಿಯೋಟೆಕ್ನಿಕಲ್ ಕೆಲಸಗಳು, ಸಣ್ಣ ಸೇತುವೆಗಳು, ರೀಟೇನಿಂಗ್ ಗೋಡೆ ಇತ್ಯಾದಿ ನಿರ್ಮಾಣ ಪೂರ್ವ</td></tr>
</table>

| | | |
|---|---|---|
| | | ಚಟುವಟಿಕೆಗಳು ಚಾಲ್ತಿಯಲ್ಲಿದ್ದು, ಭೌತಿಕ ಪ್ರಗತಿ ಶೇ.5 ರಷ್ಟು ಸಾಧಿಸಲಾಗಿದೆ.<br><br>ಮೇಲಿನಂತೆ 148.17 ಕಿ.ಮೀ. ನ ಸಿವಿಲ್ ಕಾಮಗಾರಿಗಳಲ್ಲಿ 72 ಕಿ.ಮೀ ಕಾಮಗಾರಿಗೆ ಅವಾರ್ಡ್ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br><br>KfW ನೊಂದಿಗೆ 300 ಮಿಲಿಯನ್ ಯೂರೋ ಮತ್ತು EIB ಯೊಂದಿಗೆ 200 ಮಿಲಿಯನ್ ಯುರೋಗಳ ಸಾಲದ ಒಪ್ಪಂದವನ್ನು ಕ್ರಮವಾಗಿ 15.12.2023 ಮತ್ತು 14.06.2024 ಸಹಿ ಮಾಡಲಾಗಿದೆ (ಒಟ್ಟು ₹ 7438 ಕೋಟಿ).<br><br>C-4 ಸ್ಟೇಷನ್‌ಗಳ (18 ಸಂಖ್ಯೆಗಳು) ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾರಿಡಾರ್-1A (ಬೆಂಗಳೂರು ನಗರದಿಂದ ಯಲಹಂಕ: 12 ನಿಲ್ದಾಣಗಳೊಂದಿಗೆ 17 ಕಿಮೀ), ಹಳಿಗಳು, C-2 ಟ್ರ್ಯಾಕ್ ಹಾಕುವಿಕೆ, ಸಿಗ್ನಲಿಂಗ್, ಟೆಲಿಕಾಂ, ಟ್ರ್ಯಾಕ್ಷನ್ ಮತ್ತು ವಿದ್ಯುತ್ ಸರಬರಾಜು, ಡಿಪೋ, ಇವುಗಳು ಟೆಂಡರ್ ಹಂತದಲ್ಲಿದೆ. |
| ಇ) | ಈ ಉಪನಗರ ರೈಲ್ವೆ ಯೋಜನೆಯನ್ನು ಬೆಂಗಳೂರು ಸುತ್ತ ಮುತ್ತಲಿನ ವರ್ತುಲ ರೈಲ್ವೆ ಹಳಿಗೆ ಸಂಪರ್ಕ ಕಲ್ಪಿಸುವ ಯೋಜನೆ ಹಾಕಿಕೊಳ್ಳಲಾಗಿದೆಯೇ; (ವಿವರಣೆ ನೀಡುವುದು) | ಹೌದು. ಹಂತ-2 ರಲ್ಲಿ ನೈಋತ್ಯ ರೈಲ್ವೆಯು (SWR) ಪ್ರಸ್ತಾಪಿಸಿರುವ Circular ರೈಲ್ವೆಗೆ BSRP ಅನ್ನು ಸಂಪರ್ಕಿಸುವ ಪ್ರಸ್ತಾವನೆಯು ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಇದಕ್ಕಾಗಿ K-RIDE ನಿಂದ ಕಾರ್ಯಸಾಧ್ಯತೆಯ ಅಧ್ಯಯನವನ್ನು ಕೈಗೊಳ್ಳಲು ನೈಋತ್ಯ ರೈಲ್ವೆ ಇವರನ್ನು ದಿನಾಂಕ:23.09.2024 ರಂದು ಅನುಮೋದನೆ ಕೋರಿದೆ. |
| ಈ) | ಬೆಂಗಳೂರಿಗೆ ಹತ್ತಿರವಿರುವ ತುಮಕೂರು, ಮಾಗಡಿ, ಗೌರಿಬಿದನೂರು, ಕೋಲಾರ ಮತ್ತಿತರ ನಗರಗಳಿಗೆ ಈ ಉಪನಗರ ರೈಲ್ವೆ ಯೋಜನೆಯನ್ನು ವಿಸ್ತರಣೆ ಮಾಡಲಾಗುವುದೆ? (ವಿವರ ನೀಡುವುದು) | ಪ್ರಸ್ತಾಪಿತ 148.17 ಕಿ.ಮೀ. ನೆಟ್‌ವರ್ಕ್ ಅನ್ನು ಬೆಂಗಳೂರು ನಗರದ ಪ್ರಮುಖ ನಗರ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಬೆಂಗಳೂರು ನಗರದ ಉಪನಗರ ಮತ್ತು satellite town ಗಳಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಉತ್ತಮ ಸಂಪರ್ಕವನ್ನು ಒದಗಿಸುವ ಸಲುವಾಗಿ ಚಿಕ್ಕಬಳ್ಳಾಪುರ, ಮೈಸೂರು, ಕೋಲಾರ, ಗೌರಿಬಿದನೂರು, ಹೊಸೂರು, ತುಮಕೂರು, ಬಂಗಾರಪೇಟೆ ಮತ್ತು ಮಾಗಡಿಗಳಂತಹ ಪ್ರದೇಶಗಳನ್ನು ಸಂಪರ್ಕಿಸುವುದು BSRP ಯ ಮುಖ್ಯ ಗುರಿಯಾಗಿದೆ.<br><br>ಹಂತ-1 ರ ವಿಸ್ತರಣೆಯಾದ ಚಿಕ್ಕಬಳ್ಳಾಪುರ, ಕುಣಿಗಲ್, ದಾಬಸ್‌ಪೇಟೆ, ಹೆಜ್ಜಾಲ, ಆನೇಕಲ್ ರಸ್ತೆ, ವಡೇರಹಳ್ಳಿಗೆ ಸಂಪರ್ಕ ಕಲ್ಪಿಸುವ ಹಂತ-2ರ (146 ಕಿಮೀ) ಕಾರ್ಯಸಾಧ್ಯತಾ ಅಧ್ಯಯನವನ್ನು ಕೈಗೊಳ್ಳಲು K-RIDE ನಿಂದ ದಿನಾಂಕ: 23.09.24 ರಂದು ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ರೈಲ್ವೆಯಿಂದ ಅನುಮೋದನೆ ನಿರೀಕ್ಷಿಸಲಾಗಿದೆ. |

ಸಂಖ್ಯೆ: ಮೂಅಇ 282 ರಾರಾಹ 2024

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು